

## ಮೊಹರಂ ಕೊನೆಯ ದಿನ

ಹರೆಯ ಉರಿಯುವ ಹುಡುಗರಲಿ
ಹುಲಿ ವೇಷದ ಸಹಜ ಬಯಕೆ
ತುಸು ಕೇಕೆ, ಜೋರು ಕುಣಿತ
ತಾಳದ ಲಯಕ್ಕೆ ಎಂತಹ ಮಣಿತ!

ಊರುಕೇರಿಯ ಪ್ರತಿ ಅಂಗಳದಲ್ಲೂ
ಹುಲಿಹೆಜ್ಜೆಗಳ, ಹುಡುಗಿಯರ ಗೆಜ್ಜೆಗಳ ಸದ್ದು
ಪಟ್ಟೆಹುಲಿ ವೇಷಧಾರಿ ಗಾಳಿಯಲಿ ಜಿಗಿದ
ನೆರೆದ ಮಂದಿಯಲ್ಲ ಅಂದರು 'ಭಲೇ ಹೈ'

ಹುಡುಗ ತೊಟ್ಟ ಹುಲಿವೇಷ ಹರಕೆ ತೀರಿಸಲೆಂದು
ಓಣಿ ಹುಡುಗಿ ಎದೆಯಲಿ ಎದ್ದಿವೆ ನೂರಾರು ಬಯಕೆಗಳು
ಬಿಟ್ಟುಬಿಡು ಅವನದು ಹೊಟ್ಟೆಪಾಡು, ದೇವರ ಹಾಡು
ದೇವರೆ ಕೊಟ್ಟುಬಿಡು ಅವನ, ನನ್ನದು ಪೀತಿಯ ಜಾಡು

ಮೊಹರಂ ಕೊನೆಯ ದಿನ ಎಲ್ಲರೂ ಒಂದು
ವೇಷದ ಹುಡುಗ ಮಾತ್ರ ಅವಳ ಕೇಂದ್ರ ಬಿಂದು

● **ಕೊಟ್ರೇಶ ಅಕ್ಕಿ**

## ವೇಷದ ಹುಲಿ

ಪಟ್ಟೆ ಪಟ್ಟೆ ಹುಲಿವೇಷ
ತೊಟ್ಟ ನಾವು ಕುಣಿಯಬಹುದು
ದಿಟ್ಟ ದಿಟ್ಟ ಹೆಜ್ಜೆ ಇಡುತ್ತಾ
ಪಟ್ಟು ಹಾಕಿ ಹೊಡೆಯಬಹುದು
ಅಟ್ಟಾಡಿಸಿ ನಲಿಯಲೂಬಹುದು

ವೇಷದ ಹುಲಿಗೆ ಇರದು ಕಿಡಿಗಣ್ಣು

ಕಿತ್ತುಕೊಂಡಿದ್ದಾರೆ ರೋಷಾವೇಷ
ಚೂಪು ಪಂಜಗಳ, ಕೋರೆಹಲ್ಲುಗಳ...

ಗಸಗಸ ತಿಕ್ಕಿದರೂ ಹರಿತವಾಗದು ಉಗುರುಗಳು
ಬೆದರು ಬೊಂಬೆಯಂತಾದ ಬದುಕು...

ಕುಣಿಯುವೆವು ನಾವು ಹುಲಿವೇಷ ಹಾಕಿ
ಯಾರಿಗೂ ನೋವಿಲ್ಲ, ಸಾವಿಲ್ಲ
ನೋಡುಗರಿಗೂ ಭಯವಿಲ್ಲ...
ನಮ್ಮದು ಕುಣಿತ ಮುಗಿಯುತ್ತಲೇ
ಅಳಿದು ಉಳಿಯುವ ವೇಷ
ನೋಡುವವರದು ನೂರಾರು ಭಾವ
ವೇಷ ಹಾಕದೆಯೂ ಕುಣಿಯುವ ಜೀವ

● **ಮಮತಾ ಶಂಕರ್**